ಗಮನ ಸೆಳೆದ. ಹಾದಿಯ ಅಂಚಿನಲ್ಲಿ ಕೆಸರಿನಲ್ಲಿ ಸ್ಫುಟವಾಗಿ ಮೂಡಿದ ಟಯರಿನ ಗುರುತುಗಳು!

"ಬಳ್ಳಿಗಳು ಸುತ್ತು ಹಾಕಿದ ಗೇಟು. ನೆಲದೊಳಕ್ಕೆ ಸಿಲುಕಿಸಿದ ತುಕ್ಕು ಹಿಡಿದ ಅಗಳಿ... ಗೇಟಿಗೆ ಹಾಕಿದ ಬೀಗ... ನೋಡಿದ್ರೆ ಇಲ್ಲಿಗೆ ವಾಹನಗಳು ಬರೋದು ಕಮ್ಮಿ ಅಂತ ಊಹಿಸ್ಬೋದು. ಪ್ರಾಯಶಃ ಏಡುಕೊಂಡಲುವಿನ ಬಳಿ ಕಾರು ಕೂಡಾ ಇಲ್ಲ. ಹಾಗಿದ್ರೆ ಈ ಗುರುತುಗಳು ಹೇಗೆ ಮೂಡಿದವು? ವಿಚಿತ್ರವಾಗಿದೆ..." ಕರಮಚಂದ ಜೇಬಿನಿಂದ ಭೂತಗನ್ನಡಿ ತೆಗೆದು, ಇನ್ನಷ್ಟು ಆಳವಾಗಿ ಪರೀಕ್ಷಿಸಿದ.

ದುರಸ್ತಿ ಕಾಣದ ಅಂದಗೆಟ್ಟ ಮನೆ. ಮನೆಯ ಎಡಮೂಲೆಯ ಸೂರಿನಲ್ಲಿ ಪಿರಮಿಡ್ ಆಕಾರದಲ್ಲಿ ನೇತಾಡುವ ಕಪ್ಪಗಿನ ಗೂಡು... ಜೇನುನೊಣಗಳದ್ದು! ಅವುಗಳ ಗುಂಯ್ ಸದ್ದು ವಿಚಿತ್ರ ಮೌನವನ್ನು ಭೇದಿಸಿ, ಮೆಲುವಾಗಿ ತೇಲಿ ಬರುತ್ತಿತ್ತು. ಮನೆಯೆದುರಿನ ಪೋರ್ಟಿಕೋದಲ್ಲಿ ತರಗೆಲೆಗಳು ಹರಡಿ ಹೋಗಿದ್ದವು. ಕರಮಚಂದನ ದೃಷ್ಟಿ ಬಾಗಿಲ ಪಕ್ಕದಲ್ಲಿನ ಅಂಗಳದಲ್ಲಿ ನೆಟ್ಟಿತ್ತು. ನಾನೂ ಕತ್ತು ಬಾಗಿಸಿ ನಿರುಕಿಸಿದೆ. ಕಂದುಗಪ್ಪು ಮಣ್ಣು ನೆಲದಲ್ಲಿ ಸಮಾಂತರವಾಗಿ ಮೂಡಿದ ಸೈಕಲ್ ಟಯರಿನ ಗುರುತುಗಳು! ಕರಮಚಂದ ಕರೆಗಂಟೆ ಅದುಮಿದ. ಕೆಲವು ನಿಮಿಷಗಳ ಸುದೀರ್ಘ ಕಾಯುವಿಕೆಯ ನಂತರ ಅಗಳಿ ಸರಿಸಿ, ಇಣುಕಿದ ವ್ಯಕ್ತಿಯನ್ನು ಕಂಡು ಒಮ್ಮೆಗೆ ನನಗೆ ಗಾಬರಿಯಾಯಿತು... ಬಿರುಗಣ್ಣು, ಕುರುಚಲು ಬಿಳಿ ಗಡ್ಡ, ಸುಮಾರಾಗಿ ಬಕ್ಕ ತಲೆ. ಹೊರಚಾಚಿಕೊಂಡಂತಿರುವ ಕಿವಿಗಳು, ನೇಪಾಳಿಯನ್ನು ಹೋಲುವ ಮುಖ ಚಹರೆ, ಸಾಧಾರಾಣ ಎತ್ತರದ ತೆಳ್ಳಗಿನ ಶರೀರದ ವಿಚಿತ್ರ ಆಸಾಮಿ! ಏಡುಕೊಂಡಲು ದೊರಗು ದನಿಯಲ್ಲಿ ಏನೆಂದು ವಿಚಾರಿಸಿದ. ನಾವು

